ಎಷ್ಟು ಚಂದ ಇರ್ತಿತ್ತು ಗೊತ್ತಾ?' ಅಂದ್ರು.

ಅಷ್ಟೊತ್ತಿಗೆ ನಾವು ಹತ್ತಬೇಕಾದ ಬಸ್ ಕಂಡಿದ್ದರಿಂದ ಹತ್ತಿ ಕುಳಿತೆವು. ಹವಾನಿಯಂತ್ರಿತ ಬಸ್ ಅದು. ಸುತ್ತಮುತ್ತಲೂ ಅಷ್ಟೆಲ್ಲ ಗೌಜುಗದ್ದಲವಿದ್ದರೂ ಬಸ್ ಒಳಗೆ ಹೋಗುತ್ತಿದ್ದಂತೆ ಒಂದುಬಗೆಯ ನಿರಾಳತೆ ನೆಲೆಸಿದಂತಾಗಿ 'ಉಸ್' ಎಂದು ಉಸಿರು ತೆಗೆದುಕೊಳ್ಳುತ್ತಾ ನಮ್ಮ ನಮ್ಮ ಮೊಬೈಲ್‌ಗಳಲ್ಲಿ ಮುಳುಗಿದೆವು.

***

'ಏಏ... ಓಡ್ರೋ ಓಡ್ರೋ, ಹಿಡ್ಕೊಳ್ರೋ ಮಗನ್ನ, ಕಾಲರ್ ಹಿಡ್ಕೊಳ್ರೋ, ಜಿಗ್ದಾ... ಬಿದ್ದಾ...' ಮುಚ್ಚಿದ ಬಸ್ಸಿನ ಕಿಟಕಿಯನ್ನು ತೂರಿಕೊಂಡು ಗದ್ದಲ ಕೇಳಿಸತೊಡಗಿತು. ನಾವಿಬ್ಬರು ಕಿಟಕಿಯಿಂದ ಹೊರಗೆ ನೋಡತೊಡಗಿದೆವು. ಕುರುಚಲು ಗಡ್ಡದ, ಕೊಳಕು ಹಿಪ್ಪಿ ಕೂದಲಿನ, ಯಾವ ಬಣ್ಣದ್ದೆಂದು ಗುರುತು ಹಿಡಿಯಲಾರದಷ್ಟು ಕೊಳಕಾದ ಅಪರಾತಪರಾ ಲೂಜು ಬಟ್ಟೆ ತೊಟ್ಟಿದ್ದ ಯುವಕನೊಬ್ಬ ನಮ್ಮ ಬಸ್ಸಿನ ಕಡೆಯೇ ಓಡಿ ಬರತೊಡಗಿದ್ದ. ಕೈಚೀಲವೊಂದನ್ನು ಎದೆಗೆ ಅವುಚಿ ಹಿಡಿದುಕೊಂಡಿದ್ದ ಆ ಯುವಕನ ಹಿಂದೆಯೇ ನಾಲ್ಕೈದು ಯುವಕರು ಬೆನ್ನಟ್ಟಿ ಬರುತ್ತಿದ್ದರು. ಒಂದಿಷ್ಟು ದೂರದಲ್ಲಿ ಟಕ್ ಟಕ್ ಅಂತ ಬೂಟುಗಳ ಶಬ್ದ ಮಾಡುತ್ತಾ ಒಬ್ಬ ಪೊಲೀಸ್ ಪೇದೆಯೂ ಓಡಿ ಬರ್ತಿದ್ದ.

ಆ ಯುವಕನ ಮುಖ ಭೀತಿಯಿಂದಲೋ ಅಸಹನೆಯಿಂದಲೋ ಅಸಹ್ಯ ವಿಕಾರವಾಗಿ ಕಾಣುತ್ತಿತ್ತು. ದುಡು ದುಡು ಓಡಿ ಬಂದವನೇ ಆ ಯುವಕ ನಮ್ಮ ಬಸ್ಸಿನ ಪಕ್ಕವೇ ಇದ್ದ ಕಬ್ಬಿಣದ ಸರಳುಗಳ ರೋಡ್ ಡಿವೈಡರನ್ನು ಒಂದೇ ಏಟಿಗೆ ಜಂಪ್ ಮಾಡಿಬಿಟ್ಟ ಅಂತ ನಾವೆಲ್ಲ ಅಂದುಕೊಳ್ಳುವಷ್ಟರಲ್ಲಿ, ಅವನ ಎಡಗಾಲು ಆ ಡಿವೈಡರ್ ಮೇಲೆ ಭರ್ಚಿಯಂತಿದ್ದ ಸರಳುಗಳ ನಡುವೆ ಸಿಲುಕಿಕೊಂಡು, ಆತ ಅಂತ ವಿಕಾರವಾಗಿ ಚೀರಿಕೊಂಡಬಿಟ್ಟ. ಇದೇನಾಯಿತು ಎಂದು ನಾವಿಬ್ಬರು ದುಡುದುಡುನೆ ಬಸ್ಸಿನಿಂದ ಕೆಳಗಿಳಿದೆವು. ಅಷ್ಟರಲ್ಲಾಗಲೇ ವಿಕಾರ ಶಬ್ದ ಹೊರಡಿಸುತ್ತಿದ್ದ ಯುವಕನ ಸುತ್ತ ಒಂದಿಷ್ಟು ಜನ ಗುಂಪುಗಟ್ಟಿ ನಿಂತಿದ್ದರು. ಉಂಗುಟ ಕಿತ್ತ ಆತನ ಸವೆದ ಹವಾಯಿ ಚಪ್ಪಲಿಯೊಂದು ಡಿವೈಡರಿನ ಸರಳಿನಲ್ಲಿಯೇ ನೇತಾಡುತ್ತಿತ್ತು. ಆ ಚಪ್ಪಲಿಯ ಮೇಲಾದ ಪಾದದ ಗುರುತಿಗೆ ರಕ್ತ ಮೆತ್ತಿಕೊಂಡು ಕೆಳಗಿಳಿಯುತ್ತ ಹನಿಗೂಡತೊಡಗಿತ್ತು.

ಆತ ಭೀತಿಯಿಂದ ಇವರತ್ತ ನೋಡಲಿಕ್ಕಾಗದೆ ಅಲ್ಲೇ ನೆಲದಲ್ಲಿ ಬಿದ್ದು ಸರಬರ ಒದ್ದಾಡುತ್ತಿದ್ದ. ಸುತ್ತುಗಟ್ಟಿ ನಿಂತಿದ್ದ ಜನರು ಮತ್ತೇರಿದಂತೆ ತೋಳೇರಿಸತೊಡಗಿದ್ದರು. ಗುಂಪಿನಲ್ಲಿದ್ದವನೊಬ್ಬ ಬಿದ್ದಿದ್ದ ಯುವಕನಿಗೆ ಜೋರಾಗಿ ಜಾಡಿಸಿ ಒದ್ದ. ಸುತ್ತಗಟ್ಟಿದವರು ಕಿರುಚುತ್ತಾ ಅವನಿಗೆ ಒದೆಯತೊಡಗಿದರು, ಗುಮ್ಮತೊಡಗಿದರು. ಬಿದ್ದವನ ಕಾಲರ್ ಹಿಡಿದು ನಿಲ್ಲಿಸಿ ಅವನ ಹೊಟ್ಟೆಗೆ ಮುಖಮೂತಿಗೆ ಇಕ್ಕತೊಡಗಿದರು. ನನ್ನ ಪಕ್ಕದಲ್ಲಿಯೇ ನಿಂತಿದ್ದ ಪ್ರೊ. ರಾಮೇಗೌಡರು ಸಹ ತೋಳೇರಿಸಿಕೊಂಡು ಹೋಗಿ ಅವನ ಕಟಬಾಯಿಗೇ ಇಕ್ಕಿದರು. ಆಮೇಲೆ ತಮ್ಮ ಚುರುಗುಡುತ್ತಿದ್ದ ಕೈಗಳನ್ನು ಬಾಯಿಗೆ ಅಡ್ಡ ಹಿಡಿದು ಊದಿಕೊಳ್ಳತೊಡಗಿದರು. ಹೊಡೆತಕ್ಕೆ ಆ ಯುವಕನ ಕೆಳದವಡೆ ಲಕ್ವಾ ಹೊಡೆದವರಿಗಾದಂತೆ ಅಡ್ಡ ತಿರುಗಿ ಎರಡು ಹಲ್ಲು ಲೂಜಾಗಿ, ಆ ಹಲ್ಲುಗಳೆಡೆಯಿಂದ ಬಳ ಬಳ ರಕ್ತ ಒಸರತೊಡಗಿತ್ತು.

'ಪೊಲೀಸ್ರು ಬಂದ್ರು ದಾರಿಬಿಡಿ' ಎಂದು ಯಾರೋ ಒದರಿದ. ಜನ ಹೊಡೆಯುವುದನ್ನು ಬಿಟ್ಟು ಹೋಳಾಗಿ ನಿಂತರು.

'ಸರಿದು ನಿಂತ್ಕೊಳ್ಳಿ ಆ ಕಡೆ. ಹೀಗೆ ಹೊಡೆಯೋದು ಕಾನೂನಿಗೆ ವಿರುದ್ಧ ಅಂತ ನಿಮಗೆ ಗೊತ್ತಿಲ್ವಾ?' ಎನ್ನುತ್ತಾ ಪೇದೆ ಆ ಯುವಕನ ಮುಂದೆ ಕೂತರ. ತನ್ನ ಕೋಲನ್ನು ರಕ್ತ ವಸರುತ್ತಿದ್ದ ಅವನ ಗದ್ದದ ಕೆಳಗಿಟ್ಟು, ಗೋಣು ಮೇಲಕ್ಕೆತ್ತಿ ಹಿಡಿದು, 'ಬೋಳಿಮಗನೆ, ಈ ಬ್ಯಾಗ್ ಯಾಕೆ ಕದ್ದೆ ಹೇಳು' ಎಂದ. ಆ ಯುವಕ ಬೆಬ್ಬೆಬ್ಬೆ ಅಂತ ಕಣ್ಣೀರು ಒರೆಸಿಕೊಂಡ. ಆತನ ಕಣ್ಣೀರಿನೊಂದಿಗೆ ರಕ್ತವೂ ಬೆರೆತು ಕೈಯೆಲ್ಲ ಕೆಂಪಾಯಿತು. 'ಬೊಗಳೋ...' ಎಂದು ಆತನ ಕಪಾಳಕ್ಕೆ ಎರಡೇಟು ಗುದ್ದು ಕೊಟ್ಟು ಮುಂಗೈ ಜಾಡಿಸಿಕೊಂಡ.

'ಸಾ, ಆತಂಗೆ ಮಾತು ಬರಂಗಿಲ್ಲ, ಮೂಗ'. ಒಬ್ಬಾತ ಕೂಗಿ ಹೇಳಿದ.

'ಮತ್ತೆ ಮೂಗಂಗೆ ರಕ್ತ ಬರೋ ಹಾಗೆ ಹೊಡೆದಿದ್ದಿರಲ್ಲೋ. ಹೀಗೆ ಹೊಡೆಯುವುದು ತಪ್ಪು ಅಂತ ಗೊತ್ತಿಲ್ವಾ ನಿಮಗೆ' ಎಂದೆನ್ನುತ್ತಲೇ ಪೇದೆ ಆತನ ಮುಂದಿದ್ದ ಕೈಚೀಲವನ್ನು ದಬ್ಬಿ ರಸ್ತೆ ಮೇಲೆ ಶುರುವಿದ. ಒಂದು ಚಿತ್ರಾನ್ನದ ಪಾಕೇಟು, ನೀರಿನ ಬಾಟ್ಲು, ಒಂದಿಷ್ಟು ಬಟ್ಟೆ ಬರೆಗಳು, ಅವತ್ತಿನ ದಿನಪತ್ರಿಕೆ... ಕರಿ ಡಾಂಬರಿನ ರಸ್ತೆ ಮೇಲೆ ಬೆತ್ತಲುಗೊಂಡು ಅನಾಥವಾಗಿ ಬಿದ್ದುಕೊಂಡವು. 'ಬ್ಬೆಬ್ಬೆಬ್ಬೆ, ಅಯ್ಯಯ್ಯ' ಎನ್ನುತ್ತಿದ್ದ ಯುವಕ ಚಿತ್ರಾನ್ನದ ಪಾಕೀಟು ಕಾಣುತ್ತಿದ್ದಂತೆ ಒಮ್ಮೆಲೆ ಅದರ ಮೇಲೆ ಹಾರಿದ. ಪಾಕೀಟು ಹರಿದು ಗಬಗಬನೆ ಮುಕ್ಕತೊಡಗಿದ. ಅನ್ನ ಗಂಟಲಲ್ಲಿ ಸಿಕ್ಕಂತಾಗಿ ಅಲ್ಲೇ ರಸ್ತೆಯ ಮೇಲೆ ಬಿದ್ದು ಉರುಳಾಡುತ್ತಿದ್ದ ಬಾಟಲಿಯಿಂದ ನೀರನ್ನು ಒಮ್ಮೆಲೆ ಬಾಯಿಗೆ ಹೊಯ್ಕೊಂಡು ಮತ್ತೆ ಮುಕ್ಕತೊಡಗಿದ.

'ಇಲ್ಲೇನು ಚಿತ್ರಾನ್ನ ತಿನ್ನೋದು. ನಡಿ ಸ್ಟೇಷನ್ನಿಗೆ, ಅಲ್ಲಿ ಬಿರಿಯಾನಿ ತಿನ್ನುವಂತೆ' ಎನ್ನುತ್ತಾ ಪೇದೆ ಆತನನ್ನು ಎಳೆದುಕೊಂಡು ಹೊರಟ. 'ಸಿಕ್ಕವ್ನೆ, ನಾ ಬಿಡ್ತೀನಾ?' ಎಂದು ಫೋನಿನಲ್ಲಿ ಯಾರೊಂದಿಗೋ ಜಂಬ ಕೊಚ್ಚಿಕೊಳ್ಳುತ್ತಿದ್ದುದು ಚದುರುತ್ತಿದ್ದ ಗುಂಪಿಗೆ ಕಾಣಿಸಿತು. 'ಬೇಟೆಯಾಡಿದ್ದು ತೋಳ. ತಾನೇ ಮಿಕ ಹಿಡಿದಂತೆ ಹಲ್ಲಿಲ್ಲದ ಹುಲಿ ಕೊಚ್ಕೊಳ್ಳೋದು ನೋಡ್ಲಾ ಮಚ್ಚಾ' ಎಂದು ಗುಂಪಲ್ಲಿದ್ದವನೊಬ್ಬ ವಿಕಾರವಾಗಿ ನಕ್ಕ.

ಬಸ್ಸಿನೊಳಗೆ ಬಂದು ಕುಳಿತುಕೊಂಡ ನಾವಿಬ್ಬರೂ ಪೂರ್ತಿಯಾಗಿ ಬೆವೆತುಹೋಗಿದ್ದೆವು. ರಾಮೇಗೌಡ್ರಂತೂ ಏದುಸಿರು ಬಿಡುತ್ತಿದ್ದರು. ಅವರು ನಾಳೆಯೇ 'ಹಸಿವು: ಆಧುನಿಕೋತ್ತರ ಮೀಮಾಂಸೆ' ಎಂಬ ವಿಷಯದ ಮೇಲೆ ಪ್ರಬಂಧ ಮಂಡಿಸುವವರಿದ್ದರು.

'ನೀವು ಚೆನ್ನಾಗಿಯೇ ಬಾರಿಸಿದ್ರಿ ಸಾ. ಹೆಬ್ಬೆರಳನ್ನು ಅಂಗೈಯಲ್ಲಿ ಮಡಕ್ಕೊಂಡು ಅವನ ಮುಖಕ್ಕೆ ಡಿಶುಂ ಡಿಶುಂ ಅಂತ ನಾಲ್ಕೇಟು ಬಾರಿಸಿದ್ದು ನೋಡಿ ನಾನು ಹೆದರಿಕೊಂಡು ಬಿಟ್ಟಿದ್ದೆ. ಮೇಷ್ಟ್ರಾದ ನಿಮಗೆ ಅದ್ಹೇಗೆ ಅಷ್ಟೊಂದು ಧೈರ್ಯ ಬಂತು ಸಾರ್' ಎಂದು ನಾನು ಅಚ್ಚರಿಯಿಂದ ಕೇಳಿದೆ.

'ಅದು ನನಗೂ ಗೊತ್ತಾಗ್ತಿಲ್ಲ. ನಾನು ಬಸ್ಸಿನಿಂದ ಇಳಿದು ಗುಂಪಲ್ಲಿ ಸೇರಿಕೊಳ್ಳುವಾಗ ನಾನು ಹಾಗೆ ಹೊಡಿತೀನಿ ಅಂತ ಭಾವಿಸಿರಲಿಲ್ಲ. ಯಾಕೆ? ಏನು? ಯಾರು? ಎಂಬುದಕ್ಕೆಲ್ಲ ತಲೆಕೆಡಿಸಿಕೊಳ್ಳದೇ ಅಲ್ಲಿದ್ದವರೆಲ್ಲ ಆ ಕಳ್ಳನಿಗೆ ಬಾರಿಸುತ್ತಿದ್ದರಲ್ಲ, ಬಹುಶಃ ಅವರೆಲ್ಲ ಸಮೂಹ ಸನ್ನಿಗೆ ಒಳಗಾಗಿದ್ರು ಅನ್ಸುತ್ತೆ. ಮನುಷ್ಯ ಎಷ್ಟೇ ಆಧುನಿಕಗೊಂಡರೂ ಅವನ ಬೇರುಗಳಿರುವುದು ಆದಿಮಾನವ ಆಡುತ್ತಿದ್ದ ಬೇಟೆಯಲ್ಲಿ ಅನ್ಸುತ್ತೆ. ಆ ಬೇಟೆಗಾರನ ಕ್ರೌರ್ಯವೇ ಒಮ್ಮೊಮ್ಮೆ ಹೀಗೆ ಮನುಷ್ಯನನ್ನ ಸಮೂಹಸನ್ನಿಗೆ ಈಡುಮಾಡುತ್ತೆ. ಎಲ್ಲ ಕ್ರೂರಿ ಪ್ರಾಣಿಗಳಂತೆ ಮನುಷ್ಯನೂ ಕ್ರೂರಿಯೇ. ಅವನ ಸುಪ್ತಾವಸ್ಥೆಯ ಪದರುಗಳಲ್ಲಿ ಕ್ರೌರ್ಯ ಮಲಕ್ಕೊಂಡಿರುತ್ತೆ. ಸಂದರ್ಭ ಸಿಕ್ಕೊಡನೆ ಹೊರಗೆ ಬಂದುಬಿಡುತ್ತೆ. ಸಮಾಜದಲ್ಲಿ ಸಭ್ಯರಂತೆ

